ಈ ಮಧ್ಯೆ ಸತ್ಯಭಾಮೆಯ ಇನ್ನೊಂದು ಪ್ರಕರಣ ಹೊರಬಿತ್ತು. ಬೆಳಗಾವಿಯಲ್ಲಿ ಮಿಲಿಟರಿಯಲ್ಲಿದ್ದ ಒಬ್ಬ ಹುಡುಗನೊಂದಿಗೆ ಅವಳ ತಿರುಗಾಟ ಶುರುವಾಗಿತ್ತಂತೆ. ಅವನು ಪ್ರತೀ ಭಾನುವಾರ ಧಾರವಾಡಕ್ಕೆ ಬಂದು ಇವಳನ್ನು ಸಿನಿಮಾ, ಹೋಟೆಲ್ ಎಂದೆಲ್ಲ ತಿರುಗಾಡಿಸಿ, ಸಂಜೆ ಮತ್ತೆ ಯುನಿವರ್ಸಿಟಿಯವರೆಗೆ ಬಂದು ಬಿಟ್ಟುಹೋಗುತ್ತಿದ್ದನಂತೆ. ಇವಳೊಡನೆ ಹೋಗುವ ಒಬ್ಬ ಇಲ್ಲಾ ಇಬ್ಬರು ಗೆಳತಿಯರ ಖರ್ಚನ್ನೂ ಪಾಪ ಆತನೇ ಭರಿಸುತ್ತಿದ್ದನಂತೆ. ಅಂಥ ಆ ಹುಡುಗ ಅವತ್ತೊಂದಿನ ಪ್ರಪೋಸ್ ಮಾಡಲು ಬರುತ್ತೇನೆಂದಾಗ ಅದೇನಾಯಿತೋ ಇವಳಿಗೆ, ಇಡೀ ದಿನ ಹಾಸ್ಟೆಲಿನಿಂದ ನಾಪತ್ತೆ. ಪ್ರತಿಸಲ ಅವನು ಬಂದಾಗ ಜೊತೆ ನೀಡುತ್ತಿದ್ದ ರೂಮ್‌ಮೇಟುಗಳೇ ಅವನ ಜೊತೆ ಸಂಜೆಯವರೆಗೂ ಕಾದು ಅವನಿಗೆ ಸಮಾಧಾನ ಹೇಳಿ ಈಗ ಬರಬಹುದು, ಇನ್ನೇನು ಬಂದೇಬಿಡುತ್ತಾಳೆ ಎಂದು ಭರವಸೆ ತುಂಬಿದ್ದೇ ಬಂತು. ಇವಳು ಮಾತ್ರ ಹಾಸ್ಟೆಲ್ ಹತ್ತಿರ ಸುಳಿಯಲಿಲ್ಲ. ಸಂಜೆಯವರೆಗೂ ಕಾದು ನಿರಾಶನಾಗಿ ಹೋದ ಹುಡುಗನ ದುಃಖ ಗೆಳತಿಯರ ಮನಸ್ಸಿನಲ್ಲೂ ಮಡುಗಟ್ಟಿತ್ತು. ಕತ್ತಲು ಕವಿಯುವ ಏಳರ ಹೊತ್ತಿಗೆ ಪ್ರತ್ಯಕ್ಷಳಾದ ಭಾಮೆಯನ್ನು ಕಂಡಾಗ ಅವಳ ಗೆಳತಿಯರಿಗೆ ಅಕ್ಷರಶಃ ಅವಳನ್ನು ಮುಖ ಮೂತಿ ನೋಡದೇ ಬಡಿದುಬಿಡಬೇಕೆನ್ನುವಷ್ಟು ಸಿಟ್ಟು ಬಂದಿತ್ತು. ''ನಿನ್ನ ಮನಸ್ಸಿನಲ್ಲಿರೋದಾದ್ರೂ ಏನು? ಯಾಕ ಸುಮ್ಮನ ಹಿಂಗ ಹುಡುಗರ್ನ ಗೋಳು ಹುಯ್ಕೋತಿ?'' ಗೆಳತಿಯರ ಪ್ರಶ್ನೆಗೆ ಮೌನವೇ ಅವಳ ಉತ್ತರವಾಗಿತ್ತಂತೆ. ಕೊನೆಗೆ ಸಿಟ್ಟು ಇನ್ನೂ ಏರಿ ಒಬ್ಬಳು, ''ರಿಲೇಶನ್ ಬಗ್ಗೆ ನಿನ್ನ ದೃಷ್ಟಿಕೋನವಾದ್ರೂ ಏನು ಹೇಳು. ಇನ್ನೂ ಎಷ್ಟು ಹುಡುಗರಿಗೆ ಹೀಗೇ ಮೋಸ ಮಾಡ್ತಿ?'' ಅಂತ ಕೇಳಿದ್ದಕ್ಕೆ ದಿಗ್ಗನೇ ಎದ್ದುಕುಳಿತ ಭಾಮಾ, ''ನನ್ನ ದೃಷ್ಟಿಕೋನ ಅಂದ್ರೆ ಅದು ವಿಶಾಲಕೋನ, ಲಂಬಕೋನ, ಸರಳಕೋನ ಇಲ್ಲಾ ಲಘುಕೋನ ಆದ್ರೂ ಆದೀತು. ಅವು ಓಪನ್ ಆಗಿರಬೇಕು, ನನಗೆ ಬೇಕೆಂದಾಗ ಒಳಗೆ ಹೋಗಿ ಹೊರಬರುವಂಥ ಸ್ವಾತಂತ್ರ್ಯ ನೀಡುವ ಕೋನಗಳಾಗಿರಬೇಕು. ಆದ್ರೆ ತ್ರಿಕೋನ, ಚೌಕೋನ, ಆಯತಾಕಾರ, ಷಟ್ಕೋನ ಹೀಗೆ ಮುಚ್ಚಿದ ಕೋನಗಳಂದ್ರೆ ನನಗಾಗುವುದಿಲ್ಲ. ಒಂದೇ ರಿಲೇಶನ್‌ನಲ್ಲಿ ಬಂಧಿಸಿಕೊಂಡು ಇರಲಾರೆ'' ಎಂದವಳೇ ಮುಸುಕು ಹಾಕಿ ಮಲಗಿಬಿಟ್ಟಳಂತೆ. ಪಾಪ ಆ ಹುಡುಗ ಬಚಾವಾದ ಎಂದು ಗೆಳತಿಯರು ನಿಟ್ಟುಸಿರು ಬಿಟ್ಟರಂತೆ. ಇದಿಷ್ಟೂ ನಂತರ ನಮಗೆ ಬಂದ ಸುದ್ದಿ. ಅವಳ ರೂಮ್‌ಮೇಟುಗಳೇ ಬಂದು ನಮ್ಮ ರೂಮಿನಲ್ಲಿ ಕುಳಿತು ಕತೆ ಮಾಡಿ ಹೇಳಿ ತಣ್ಣಗಾದರು. ನಾನು ಯೋಚನೆ ಮಾಡುತ್ತಿದ್ದೆ. ಹಾಗಿದ್ದರೆ ನನ್ನ ಕೋನ ಯಾವುದು? ಅವಳಂತೆ ಬಂಧನವೇ ಇಲ್ಲದ ರಿಲೇಶನ್ ಅಂತೂ ನನಗೆ ಬೇಕಿಲ್ಲ. ಆದರೆ ತ್ರಿಕೋನ, ಚೌಕೋನವೂ ಬೇಡ. ನಾನು ನನ್ನ ಹುಡುಗ ಇಬ್ಬರೇ ಇರಬಹುದಾದಂಥ ಎರಡೇ ಕೋನಗಳ ಮುಚ್ಚಿದ ಆಕಾರ ಯಾವುದಾದರೂ ಇರಬಹುದೇ? ನನ್ನ ಯೋಚನೆಗೆ ನನಗೇ ನಗು ಬಂದು ಖೊಳ್ಳನೇ ನಕ್ಕೆ. ಮಧುರಾ ಆಶ್ಚರ್ಯದಿಂದ ನೋಡಿದಳು. ''ಏನು ಅವಳ ರಿಲೇಶನ್ ಮುರಿದುಬಿದ್ದಿದ್ದಕ್ಕೆ ಖುಷಿ ಆತೇನು?'' ''ಅಯ್ಯೋ ಅದಕ್ಕಲ್ಲ ಮಾರಾಯ್ತಿ. ಅದು ಪಕ್ಕಾ ಆಗಿದ್ದರೆ ನನಗೆ ಹೆಚ್ಚು ಖುಷಿ ಆಗ್ತಿತ್ತು'' ಎಂದೆ. ''ಅದೂ ನಿಜ ಅನ್ನು'' ಎಂದು ನಕ್ಕಳು.



ಫೇರ್‌ವೆಲ್ ಪಾರ್ಟಿಯ ಕಾರ್ಯಕ್ರಮಗಳು ಮುಗಿದು, ಜೂನಿಯರ್‌ಗಳು ಕೊಟ್ಟ ಸ್ವೀಟು, ಪೂರಿ–ಕೂರ್ಮಾ ಎಲ್ಲ ತಿಂದು, ಮೇಲೆ ಕಾಫಿ ಕುಡಿದು ಹೊರಡುವಷ್ಟರಲ್ಲಿ ರಾತ್ರಿ ಎಂಟಾಗಿತ್ತು.